ಬೆಂಗಳೂರು ಡಿವೀರ್ಜ್ ಸೆಂಟ್ರಲ್ ರಿಕಾರ್ಡು ಆಫೀಸು.

ರಿಕಾರ್ಡುಗಳನ್ನು ನಾಶಪಡಿಸುವಿಕೆ.

1907ನೆ ಇಸವಿ ಮಾರ್ಚ್ 11.

ಮೈಸೂರು ಚೀಫ್ ಕೋರ್ಟು 1905ನೆ ಇಸವಿ ಸೆಪ್ಟಂಬರ್ 26ನೆ ಮತ್ತು 122ನೆ ನಂಬರು ರೂಲ್ಸು ಆಫ್ ಪ್ರಾಕ್ಟೀಸ್ ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—

ಈ ಡಿವೀರ್ಜಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ನವಂಬರು 1ನೆ ತಾರೀಖು ಲಾಗಾಯಿತು 1906ನೆ ಜೂನ್ 30ನೆ ತಾರೀಖು ವರಿಗೆ ದಾಖಲಾಗಿ ಫೈಸಲಾದ ಈ ಕೆಳಗೆ ವಿವರಿಸಿರುವ ಸಿವಿಲ್ ಮೊಕದ್ದಮೆಗಳಲ್ಲಿ ಕಕ್ಷಿಗಾರರು ಮತ್ತು ಸಾಕ್ಷಿಗಳಿಂದ ಹಾಜರ್ಮಾಡಲ್ಪಟ್ಟ ವಿಶಿಷ್ಟ ಕಾಗದ ಪತ್ರಗಳು ವಾಪಸು ತೆಗದುಕೊಳ್ಳದೆ ಇದ್ದಪಕ್ಷದಲ್ಲಿ ಮೇಲ್ಕಂಡ ರೂಲ್ಸು ಆಫ್ ಪ್ರಾಕ್ಟೀಸ್‌ನಲ್ಲಿ ಉದಹರಿಸಿರುವಂತೆ ನಾಶಪಡಿಸಲ್ಪಡುತ್ತೆ ತಿಳಿಯುವದು.

ಕೋರ್ಟುಗಳ ಹೆಸರು.	ಇಸವಿ.	ಮೊಕದ್ದಮೆಗಳ ಸ್ವಭಾವ.			ಟೀಕುಗಳು.
		ಸಿವಿಲ್ ಮೊಕದ್ದಮೆಗಳು	ಅಮಲ್ಜಾರಿ.	ಮಿಸಲೇನಿಯಸ್.	
ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟು.	1905—06	4ನೆ ನಂಬರ್ ಲಾಗಾಯಿತು 10ರ ವರಿಗೆ.	9ನೆ ನಂಬರ್ ಲಾಗಾಯಿತು 22ರ ವರಿಗೆ.	46ನೆ ನಂಬರ್ ಲಾಗಾಯಿತು 96ರ ವರಿಗೆ.	...
ಬೆಂಗಳೂರು ಸಬ್ ಜಡ್ಜ್ ಕೋರ್ಟು.	ಡಿಟೋ	302ನೆ ನಂ. ಲಾಗಾಯಿತು 825ರ ವರಿಗೆ.	428ನೆ ನಂ. ಲಾಗಾಯಿತು 1175ರ ವರಿಗೆ.	322ನೆ ನಂ. ಲಾಗಾಯಿತು 771ರ ವರಿಗೆ.	...
ಬೆಂಗಳೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟು.	ಡಿಟೋ	386ನೆ ನಂ. ಲಾಗಾಯಿತು 1184ರ ವರಿಗೆ.	638ನೆ ನಂ. ಲಾಗಾಯಿತು 2001ರ ವರಿಗೆ.	310ನೆ ನಂ. ಲಾಗಾಯಿತು 856ರ ವರಿಗೆ.	...
ಬೆಂಗಳೂರು ಅಡೀಷನಲ್ ಮುನ್ಸೀಫ್ ಕೋರ್ಟು.	ಡಿಟೋ	381ನೆ ನಂ. ಲಾಗಾಯಿತು 968ರ ವರಿಗೆ.	445ನೆ ನಂ. ಲಾಗಾಯಿತು 1297ರ ವರಿಗೆ.	201ನೆ ನಂ. ಲಾಗಾಯಿತು 637ರ ವರಿಗೆ.	...
ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟು.	ಡಿಟೋ	335ನೆ ನಂ. ಲಾಗಾಯಿತು 827ರ ವರಿಗೆ.	447ನೆ ನಂ. ಲಾಗಾಯಿತು 1205ರ ವರಿಗೆ.	203ನೆ ನಂ. ಲಾಗಾಯಿತು 494ರ ವರಿಗೆ.	...
ಕೋಲಾರದ ಮುನ್ಸೀಫ್ ಕೋರ್ಟು.	ಡಿಟೋ	268ನೆ ನಂ. ಲಾಗಾಯಿತು 762ರ ವರಿಗೆ.	302ನೆ ನಂ. ಲಾಗಾಯಿತು 916ರ ವರಿಗೆ.	193ನೆ ನಂ. ಲಾಗಾಯಿತು 523ರ ವರಿಗೆ.	...
ಕೋಲಾರದ ಗಣಿ ಮುನ್ಸೀಫ್ ಕೋರ್ಟು.	ಡಿಟೋ	338ನೆ ನಂ. ಲಾಗಾಯಿತು 1141ರ ವರಿಗೆ.	396ನೆ ನಂ. ಲಾಗಾಯಿತು 1116ರ ವರಿಗೆ.	128ನೆ ನಂ. ಲಾಗಾಯಿತು 385ರ ವರಿಗೆ.	...
ತುಮ್ಕೂರು ಮುನ್ಸೀಫ್ ಕೋರ್ಟು.	ಡಿಟೋ	648ನೆ ನಂ. ಲಾಗಾಯಿತು 1528ರ ವರಿಗೆ.	706ನೆ ನಂ. ಲಾಗಾಯಿತು 1711ರ ವರಿಗೆ.	260ನೆ ನಂ. ಲಾಗಾಯಿತು 742ರ ವರಿಗೆ.	...
ಮದ್ದಗಿರಿ ಮುನ್ಸೀಫ್ ಕೋರ್ಟು.	ಡಿಟೋ	254ನೆ ನಂ. ಲಾಗಾಯಿತು 641ರ ವರಿಗೆ.	229ನೆ ನಂ. ಲಾಗಾಯಿತು 618ರ ವರಿಗೆ.	104ನೆ ನಂ. ಲಾಗಾಯಿತು 303ರ ವರಿಗೆ.	...
ಚಿಕ್ಕಬಳ್ಳಾಪುರ ಮುನ್ಸೀಫ್ ಕೋರ್ಟು.	ಡಿಟೋ	227ನೆ ನಂ. ಲಾಗಾಯಿತು 620ರ ವರಿಗೆ.	487ನೆ ನಂ. ಲಾಗಾಯಿತು 1222ರ ವರಿಗೆ.	189ನೆ ನಂ. ಲಾಗಾಯಿತು 521ರ ವರಿಗೆ.	...

ಟಿ. ಪರಮೇಶ್ವರ ಐಯ್ಯರ್,
ಆಫೀಸರ್ ಇನ್‌ಚಾರ್ಜ್ ಆಫ್ ಸೆಂಟ್ರಲ್ ರಿಕಾರ್ಡ್ಸ್, ಬೆಂಗಳೂರು ಡಿವೀರ್ಜ್.

ಹಾಸನ ಡಿವೀರ್ಜ್.

ನೋಟಿಸ್.

ಈ ಕೆಳಗೆ ನಮೂದಿಸಿರುವ ಹೆಸರುಗಳಿಗೆ ಪ್ರತಿಯಾಗಿ ತೋರಿಸಿರುವ ಮೊಬಲಗು ಸದರಿಯವರಿಗೆ ಪಾವತಿಯಾಗದೆ, ಈ ಆಫೀಸಿನ ಅಕೌಂಟ್ಸ್ ಡಿಪಾಜಿಟ್‌ನಲ್ಲಿ ಜಮಾ ನಿಂತಿರುತ್ತೆ. ಈ ನೋಟಿಸು ಫಾಯಿಷಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ

ಆಯೊಯ ಹಕ್ಕುದಾರರೇ ಆಗಲಿ. ಅಥವಾ ಅವರು ಮೃತಪಟ್ಟಿದ್ದ ಪಕ್ಷದಲ್ಲಿ ಅವರ ನ್ಯಾಯವಾದ ಹಕ್ಕುದಾರರೇ ಆಗಲಿ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿ ಸದರಿ ಮೊಬಲಗು ತಮಗೆ ಸಲ್ಲಬೇಕೆಂದು ತಿಳಿಸದಪಕ್ಷದಲ್ಲಿ ಅದು ಸರ್ಕಾರಕ್ಕೆ ಸೇರಿಸಲ್ಪಡುತ್ತೆ :—

ನಂ.	ಹೆಸರು.	ಸಲ್ಲಬೇಕಾದ ಮೊಬಲಗ್ಗೆ ಅವರಿಂದ ಮಾಡಲ್ಪಟ್ಟ ಕೆಲಸಗಳು.	ಸಲ್ಲಬೇಕಾದ ಮೊಬಲಗು.
			ರೂ. ಆ. ಪೈ.
1	ವೆಂಕಟನಾಯಕ	1904-05ನೆ ಬೂಣಾವಾರ್, ಬೇಲೂರು, ಮೂಡಿಗೆರೆ ರಸ್ತೆ ರಿಪೇರಿ.	8 11 7
2	ಮುನಿಸಾಮಿ ...	ಡಿಟ್ಟೋ ...	1 4 9
3	ಅಲಸಿಂಗಾಚಾರಿ ಮತ್ತು ನರಸಿಂಹಾಚಾರಿ.	ಬುಡನೂರು ಕೆರೆ ರಿಪೇರಿ ಮಾಡಿದ್ದು ...	3 0 0
4	ಡಿ. ವೆಂಕಟನಾಯ್ಡು ...	904—05ನೆ ಹಾಸನ, ಚಿಕ್ಕಮಗಳೂರು ರಸ್ತೆ ರಿಪೇರಿ	24 11 0

ಎಫ್. ಎ. ಸ್ಟೀಲ್,
ಅಫೀಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸಿನಿಂದ.

ಇನ್ಸಿಪಾರ್.

ತಾರೀಖು 5ನೆ ಏಪ್ರಿಲ್ 1907.

ಇದರಿಂದ ಸರ್ವಸ್ವ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರವಾದ 29—6—1901ನೆ ಮುಕ್ರ್ಯೂ 17691—L. B. (P) 633ನೆ ನವೆಂಬರ್ ಪ್ರೊಸೀಡಿಂಗ್ಸ್ ಅನುಸಾರ ಇದರ ಮಾಜ್ಜನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಎಕ್ಸ್‌ಟೆಂಷನ್‌ಗೆ ಸೇರಿದ ಕಟ್ಟಡ ಕಟ್ಟುವತಕ್ಕ ನೈಟುಗಳನ್ನು 1907ನೆ ಇಸವಿ ಏಪ್ರಿಲ್ ತಾ॥ 20ರಲ್ಲು ಹರಾಜು ಮೂಲಕ ವಿ

ಬಸವನಗುಡಿ ಎಕ್ಸ್‌ಟೆಂಷನ್.	ಅಳತೆ.	ಹರಾಜು ತಾರೀಖು.
1ನೆ ಬ್ಲಾಕ್	232—233—234—235—236 237—238—239—240 } 110 × 30 241 & 242	20-4-07
3ನೆ (ಬಿ) ಬ್ಲಾಕ್	130—131—132—133—134 135—136—137—138 } 120 × 30 139—140—141—142 144—145—146—147	
	148 & 149	
	143 } 120 × 34	

ಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡಿ ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪೂರ್ವಾಹ್ನ 7½ ಘಂಟೆ ಲಾಗಾಯಿತ್ತು ಆಯಾಪ್ಲು ನೈಟುಗಳ ಬಳಿ ಹಾಜರಿದ್ದು ಛಡಿ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಛಡಿಸವಾಲ್‌ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರ್ತಿಪಡೆ ನಿಲ್ಲುವ ನೈಟುಗಳನ್ನು ಮೂರು ದಿವಸಗಳಲ್ಲಿ ಅದೇ ಟೈಮಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡ್ಲೆ ಛಡಿ ಸವಾಲ್ ಮೊಬಲಗಿನಲ್ಲಿ ಕೀಕಡೆ 25 ರೂಪಾಯಿನಂತೆ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡಿಸವಾಲ್‌ದಾರನ್ನ ಗುರುಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತ್ತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡಿಸವಾಲ್ ಮೊಬಲಗ್ಗೆ ನ್ಯಾರ್ತಿಯಾಗಿ ಕೊಡತಕ್ಕ ಕೀಕಡೆ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡಿಸವಾಲ್‌ದಾರ ಹಾಜರ್‌ಪಡಿಸಿ ರಸೀತ ಪಡಿಯಬೇಕು. ಇದ್ದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ನೈಟನ್ನ ದುಸರಾ ಹರಾಜಿಗೆ ತಂದುಮಾಡಿ ಬರುವ ನಷ್ಟಕ್ಕೆ ಮೊದಲು ಛಡಿಸವಾಲ್‌ದಾರನ್ನ ಗುರುಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ನೈಟನ್ನ ಛಡಿಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಸುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಂಬಟಿಗೆ ಕಡಿವು ಇಲ್ಲದಷ್ಟು ಜಾಗವನ್ನು ಮೇಲೆ ಜಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಎರತಕ್ಕದ್ದಕ್ಕಾಗಿ ಯಾವಾಗೆಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನು ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.